ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಕೆ. ಪ್ರಭಾಕರ ಭಂಗೇರ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದಿರುವ ಬೆಳ್ತಂಗಡಿ ತಾಲ್ಲೂಕಿನ ಮುಂಡಾಜೆ ಮೃತ್ಯುಂಜಯ ನದಿಯಿಂದ ಕಡಂಬಳ್ಳಿವಾಳ್ಯದ ತೋಟಗಳಿಗೆ ಮುಂಡಾಜೆ ಸೇತುವೆಯ ಅಡಿಯಿಂದ ಕಾಲುವೆಯ ಮೂಲಕ ಹರಿದು ಬರುವ ನೀರಿಂದಾಗಬಹುದಾದ ತೊಂದರೆಯ ಬಗೆಗಿನ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಶಾಸನ ರಚನೆ

ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2000

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಚ್.ಕೆ. ಪಾಟೀಲ್ (ಭಾರೀ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ, 2000ನೇ ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವೇನೆಂದರೆ '2000ದ ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಚ್.ಕೆ. ಪಾಟೀಲ್ (ಭಾರೀ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ, 2000ದ ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : X ವಿಧೇಯಕವನ್ನು ಮಂಡಿಸಲಾಗಿದೆ. X ಇನ್ನು ಮುಂದಿನ ವಿಷಯ, ಮಾನ್ಯ ಕೃಷ್ಣಮೂರ್ತಿಯವರೆ ನಿಮ್ಮ ವಿಷಯದಲ್ಲಿ ಸಂಬಂಧಪಟ್ಟ ಮಾನ್ಯ ಸಚಿವರಿಗೆ ಬರೆದಿದ್ದೇನೆ. ಇನ್ನು ಉತ್ತರ ಬಂದಿಲ್ಲವಲ್ಲ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಸರ್ಕಾರಿ ಅಧಿಕಾರಿಗಳು ಶಿಷ್ಟಾಚಾರ ಉಲ್ಲಂಘಿಸಿ ಶಾಸಕ ಸ್ಥಾನಕ್ಕೆ ಹಕ್ಕುಚ್ಯುತಿ ಉಂಟು ಮಾಡಿರುವುದು.

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರಳ್ಳಿ) : ಈಗ ನಾನು ಆ ವಿಷಯ ಪ್ರಸ್ತಾಪಿಸುತ್ತೇನೆ. ತಾವು ರೂಲಿಂಗ್ ಕೊಟ್ಟರೆ ಆಯಿತು. ಮಾನ್ಯ ಅಧ್ಯಕ್ಷರೇ, ಅಕ್ಟೋಬರ್ 27 ರಂದು ನನ್ನ ಸಂತೇಮರಳ್ಳಿ

X ಅನುಬಂಧ